ಸಿ.ಸಿ .ನಂ. 40/2023 ಪಿಡಬ್ಲ್ಯೂ: 1

ದಿನಾಂಕ: 07-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಆರೋಪಿಯ ಪರವಾಗಿ: ಶ್ರೀ ವಾಯ್ ಆರ್ ಎಮ್ ವಕೀಲರಿಂದ:**

4. ನಮ್ಮ ಸಂಸ್ಥೆಯಲ್ಲಿ ಸಾಲದ ಅರ್ಜಿಗಳ ಫಾರ್ಮೆಟ್ ಗಳು ಇವೆ ಎಂದರೆ ಸರಿ . ನಮ್ಮ ಸಂಸ್ಥೆಯಲ್ಲಿ ವೈಯಕ್ತಿಕ ಸಾಲದ ಮಿತಿ 10 ಲಕ್ಷ ರೂಪಾಯಿಗಳವರೆಗೆ ಇದೆ . ನಾನು ಹೇಳುವ ಪ್ರಕಾರ ಈ ಸಾಲದ ಅರ್ಜಿ ಮಂಜೂರಾಗಿಲ್ಲ ಒಂದುವೇಳೆ ಮಂಜೂರಾಗಿದ್ದರೆ ಆ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸುತ್ತಿದ್ದೆ ಎಂದರೆ ಸಾಕ್ಷಿ ಸಾಲ ಮಂಜೂರಾಗಿದೆ ಎಂದು ನುಡಿದಿರುತ್ತಾರೆ . ನಮ್ಮ ಸಂಸ್ಥೆಯಲ್ಲಿ ಮೆಂಬರ ಇರುವ ವ್ಯಕ್ತಿಯನ್ನೇ ಜಾಮೀನುದಾರರನ್ನಾಗಿ ಪಡೆಯುತ್ತೇವೆ . ಈ ಒಂದು ಸಾಲದ ಅರ್ಜಿಯನ್ನು ವ್ಯವಹಾರಕ್ಕೆ ಸಂಬಂಧಪಟ್ಟಂತೆ ಹಾಕಿದ್ದರು. ಸಾಲ ನೀಡುವ ಸಂದರ್ಭದಲ್ಲಿ ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆದುಕೊಳ್ಳಲು ತೊಂದರೆ ಇರಲಿಲ್ಲ . ಸಾಲ ಮಂಜೂರಾಗಿದ್ದ ಕಾರಣ ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಸಂಸ್ಥೆಯಲ್ಲಿ ಯಾವುದೇ ಒಂದು ಸಾಲದ ಅರ್ಜಿ ಬಂದಾಗ ನಮ್ಮ ಆಡಳಿತ ಮಂಡಳಿಯವರು ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲಿಸಿಯೇ ಸಾಲ ಮಂಜೂರು ಮಾಡುತ್ತಾರೆ ಎಂದರೆ ಸರಿಯಲ್ಲ. ಹಿಂದಿನ ವ್ಯವಹಾರವನ್ನು ನೋಡಿ ಕೂಡ ಸಾಲ ಕೊಡುತ್ತಾರೆ . ಈ ಸಾಲ ಮಂಜೂರಾತಿ ಸಮಯದಲ್ಲಿ ಹಿಂದಿನ ವ್ಯವಹಾರದ ದಾಖಲಾತಿಗಳನ್ನು ಪರಿಶೀಲಿಸಿದ್ದಾರೆ .

5. ಸಾಲ ಕಟಬಾಕಿಯಾದಾಗ ನಮ್ಮ ಬ್ಯಾಂಕಿನ ಮೂಲಕ ಆರೋಪಿಗೆ ನೋಟಿಸನ್ನು ಕೊಟ್ಟಿದ್ದೆವು . ಸಾದಾ ನೋಟಿಸು ಹಾಗೂ ರಜಿಸ್ಟರ ಪೋಸ್ಟ ಮೂಲಕ ನೋಟಿಸನ್ನು ಕಳಿಸಿರುತ್ತೇವೆ . ನಾನು ಹೇಳಿದ ರೀತಿಯ ಅಂತಹ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ .

ಪಿಡಬ್ಲೂ: 1

ನಾನು ಹೇಳುವ ಪ್ರಕಾರ ಈ ಸಾಲದ ಜಾಮೀನುದಾರರಾಗಲೀ , ಸಾಲಗಾರರಿಗಾಗಲೀ ಯಾವುದೇ ನೋಟಿಸನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

6. ಚೆಕ್ ನ ಮೇಲಿರುವ ಬರವಣಿಗೆ ಮತ್ತು ಮೊತ್ತ ಒಂದೇ ಪೆನ್ನಿನಲ್ಲಿ ಬರೆದಿರುವ ಬರವಣಿಗೆ ಎಂದರೆ ಸರಿ. ಚೆಕ್ ನ ಮೇಲಿರುವ ಬರವಣಿಗೆಯನ್ನು ನಮ್ಮ ಶಾಖೆಯ ಸಿಬ್ಬಂದಿಯವರೇ ಬರೆದಿದ್ದಾರೆ ಎಂದರೆ ಸರಿಯಲ್ಲ. ಚೆಕ್ ಮೇಲಿರುವಂತಹ ಬರವಣಿಗೆ ಹಾಗೂ ಮೊತ್ತವನ್ನು ನಮ್ಮ ಶಾಖೆಯವರೇ ಬರೆದು ಹಾಜರು ಪಡಿಸಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವತ್ತೂ ನಿಪಿ-2 ಚೆಕ್ ನ್ನು ನೀಡಿದ್ದು ಇಲ್ಲ ಎಂದರೆ ಸರಿಯಲ್ಲ . ಕಟಬಾಕಿಯಾಗಿದೆ ಎಂದು ನೋಟಿಸನ್ನು ಕೊಟ್ಟಿಲ್ಲ ಕಾರಣ ಚೆಕ್ ನೀಡುವ ಅವಕಾಶ ಇಲ್ಲ ಎಂದರೆ ಸರಿಯಲ್ಲ. ನಾವು ಫಿರ್ಯಾದಿನಲ್ಲಿ ಬರೆದಂತಹ ಎಲ್ಲಾ ದಾಖಲಾತಿಗಳು ನಾವೇ ಸೃಷ್ಟಿಸಿ ಹಾಜರು ಪಡಿಸಿದಂತಹ ದಾಖಲಾತಿಗಳು ಎಂದರೆ ಸರಿಯಲ್ಲ . ನಾವು ಹೇಳುವ ಪ್ರಕಾರ ಫಿರ್ಯಾದಿನಲ್ಲಿರುವಂತಹ ಮೊತ್ತವನ್ನು ಆರೋಪಿ ಕಾನೂನುಬದ್ಧವಾಗಿ ಭರಿಸಬೇಕಾದದ್ದು ಇಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ನಾವೇ ಸೃಷ್ಟಿ ಮಾಡಿ ಹಾಜರು ಪಡಿಸಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.